**ಅ. ದಾ. ಸಂ. ಃ 273/2015**
**ಪಿ . ಡಬ್ಲ್ಯೂ ಃ 01**

**ದಿನಾಂಕ ಃ 01-07-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ-ಪ್ರತಿವಾದಿಯ ಪರ ಶ್ರೀಮತಿ. ಹೆಚ್.ಎಂ. ಸಿ, ವಕೀಲರಿಂದ ಃ-**

ದಾವಾ ಸ್ವತ್ತಿನ ಸರ್ವೆ ನಂ.54 ಆಗಿದೆ. ಈ ದಾವೆಯನ್ನು ಹಕ್ಕು ಘೋಷಣೆ ಮತ್ತು ಶಾಶ್ವಾತ ನಿರ್ಬಂದಕಾಜ್ಞೆಯ ಪರಿಹಾರವನ್ನು ಕೇಳಿ ಸಲ್ಲಿಸಲಾಗಿದೆ. ಸರ್ವೆ ನಂ.54 ರ ಒಟ್ಟು ವಿಸ್ತೀರ್ಣ 5 ಎಕರೆ 3 ಗುಂಟೆ ಇದೆ. ಅದರಲ್ಲಿ 7 ಗುಂಟೆ ಕರಾಬು ಇದೆ. ನಿಪಿ-7 ರಲ್ಲಿ ಚಿಕ್ಕೆಗೌಡ ಮತ್ತು ಆಂಜೀನಪ್ಪನವರ ಹೆಸರು ಇದೆ. ನಿಪಿ-7 ರಲ್ಲಿ ವಾದಿಯ ಹೆಸರು ನಮೂದಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಯ ತಾತನ ಹೆಸರಿನಲ್ಲಿ ನಿಪಿ-7 ಇದೆ ಎಂದು ನುಡಿದಿರುತ್ತಾರೆ. ವಾದಿಯ ತಂದೆಯ ಹೆಸರು ರಾಮಚಂದ್ರಯ್ಯ. ವಾದಿ ಮತ್ತು ವಾದಿಯ ತಂದೆಯ ಹೆಸರಿನಲ್ಲಿ ಸರ್ವೆ ನಂ. 54 ರಲ್ಲಿ ಸ್ವತ್ತು ಇದೆ ಎಂದು ತೋರಿಸಲು ನಾನು ಯಾವುದೇ ರೆವಿನ್ಯೂ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ನಿಪಿ-3 ರಲ್ಲಿ ನಮೂದಾಗಿರುವ ಶೆಡ್ಯೂಲ್ ನ ಚೆಕ್ಕುಬಂಧಿ ಮತ್ತು ವಾದಪತ್ರದ 3 ನೇ ಪ್ಯಾರಾದಲ್ಲಿ ನಮೂದಾಗಿರುವ ಚೆಕ್ಕುಬಂಧಿ ಒಂದೇ ಆಸ್ತಿಗೆ ಸೇರಿದೆ ಎಂದರೆ ಸರಿ. ಪೂರ್ವಕ್ಕೆ ಪಾಲನಹಳ್ಳಿ ಗಡಿ, ಪಶ್ಚಿಮಕ್ಕೆ ಗೌಡನಪಾಳ್ಯ ಮತ್ತು ಅಂಜನಹಳ್ಳಿ ಗಡಿ, ಉತ್ತರಕ್ಕೆ ವೀರಪುರ ಗಡಿ ಮತ್ತು ದಕ್ಷಿಣಕ್ಕೆ ಅರಿಶಿನಕುಂಟೆ ಗಡಿ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-3 ರಲ್ಲಿ ನಮೂದಾಗಿರುವ ಶೆಡ್ಯೂಲ್ ನ ಚೆಕ್ಕುಬಂಧಿ ಮತ್ತು ವಾದಪತ್ರದ 3 ನೇ

ಪ್ಯಾರದಲ್ಲಿ ನಮುದಾಗಿರುವ ಚೆಕ್ಕುಬಂಧಿ ಬೇರೆ ಬೇರೆ ಇದೆ ಎಂದರೆ ಸರಿ. ಪ್ರತಿವಾದಿಯ ತಂದೆಯ ಹೆಸರು ಚಿಕ್ಕೆಗೌಡ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯ ಚಿಕ್ಕಪ್ಪನ ಹೆಸರು ಚಿಕ್ಕೆಗೌಡ ಎಂದು ನುಡಿದಿರುತ್ತಾರೆ. ನಾನು ನನ್ನ ವಾದಪತ್ರದಲ್ಲಿ ಪ್ರತಿವಾದಿಯ ತಂದೆ ಹೆಸರು ಚಿಕ್ಕೆ ಗೌಡ ಎಂದು ಹೇಳಿದ್ದೇನೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-3 ರ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಾನು ದೃಢೀಕೃತ ನಕಲನ್ನು ನೀಡಿದ್ದೇನೆ. ನಿಪಿ-3 ಕ್ಕೆ ಸಂಬಂಧಿಸಿದ ಮೂಲ ಪ್ರತಿಯ ಬಗ್ಗೆ ನಾನು ನನ್ನ ವಾದಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**